# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕಾರ್ಪೋರೇಟ್ಐಡೆಂಟಿಫಿಕೇಷನ್ ಸಂಖ್ಯೆ(CIN) : U40109KA2004SGC035177

ನಿಗಮದ ನೋಂದಾಯಿತಕಛೇರಿ ವಿಳಾಸ ನಂ.29, 3ನೇ ಮಹಡಿ, ಕಾವೇರಿಗ್ರಾಮೀಣ ಬ್ಯಾಂಕ್‌ರಸ್ತೆ,ವಿಜಯನಗರ, 2ನೇ ಹಂತ, ಮೈಸೂರು-570017

ನಿಗಮದ ವೆಬ್‌ಸೈಟ್ ವಿಳಾಸwww.cescmysore.org

ಸಹಾಯಕಕಾರ್ಯನಿರ್ವಾಹಕಇಂಜಿನಿಯರ್(ವಿ)

ರವರಕಛೇರಿ, ಕಾರ್ಯ ಮತ್ತು ಪಾಲನೆ ಉಪ-ವಿಭಾಗ,

ಸೆಸ್ಕ್, ಮಡಿಕೇರಿ.

ದೂರವಾಣಿ: 08272-225906

ಇಮೇಲ್:cescommadikeri@gmail.com


ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಮ/2019-20/ 10547

ದಿನಾಂಕ:09/03/2020

18 MAR 2020

## ಜನ ಸಂಪರ್ಕ ಸಭೆಯ ನಡಾವಳಿಗಳು

ದಿನಾಂಕ 09.03.2020 ರಂದು ಪೂರ್ವಾಹ್ನ 11.00 ಗಂಟೆಗೆ ಮಡಿಕೇರಿ ಉಪವಿಭಾಗದ ಆವರಣದಲ್ಲಿ ಶ್ರೀಯುತ ಬಿ.ಸೋಮಶೇಖರ್ ಕಾರ್ಯನಿರ್ವಾಹಕ ಇಂಜಿನಿಯರ್(ವಿ).ಸೆಸ್ಕ್ ಮಡಿಕೇರಿ ವಿಭಾಗ ಇವರ ಅಧ್ಯಕ್ಷತೆಯಲ್ಲಿ ನಡೆದ ತ್ರೈಮಾಸಿಕ ಗ್ರಾಹಕರ ಸಂಪರ್ಕ ಸಭೆಯ ನಡಾವಳಿಗಳು.

<u>ಹಾಜರಾಗಿದ್ದ ಅಧಿಕಾರಿಗಳು/ಗ್ರಾಮಸ್ಥರು</u>

1. ಶ್ರೀ ಬಿ.ಸೋಮಶೇಖರ್ : ಕಾರ್ಯನಿರ್ವಾಹಕ ಇಂಜಿನಿಯರ್(ವಿ). ಮಡಿಕೇರಿ ವಿಭಾಗ
2. ಶ್ರೀ ಪಿ.ಎಸ್.ದೇವಯ್ಯ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ಮಡಿಕೇರಿ ವಿಭಾಗ
3. ಶ್ರೀ ಎನ್.ಮಹದೇವಯ್ಯ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ಮಡಿಕೇರಿ ಉಪವಿಭಾಗ
4. ಶ್ರೀ ಎನ್.ಎಸ್ ಸಂತೋಷ್ ಕುಮಾರ್ : ಸಹಾಯಕ ಲೆಕ್ಕಾಧಿಕಾರಿ. ಮಡಿಕೇರಿ ಉಪವಿಭಾಗ
5. ಶ್ರೀ ಬಿ.ಎಂ.ಮಹೇಶ್ : ಸಹಾಯಕ ಇಂಜಿನಿಯರ್(ತಾಂ). ಮಡಿಕೇರಿ ಉಪವಿಭಾಗ
6. ಶ್ರೀ ಸಂಪತ್ ಎ.ಆರ್. : ಸಹಾಯಕ ಇಂಜಿನಿಯರ್(ವಿ). ಮಡಿಕೇರಿ ಶಾಖೆ
7. ಶ್ರೀ ಹೇಮಂತ್ ರಾಜ್ : ಕಿರಿಯ ಇಂಜಿನಿಯರ್(ವಿ). ತಾಳತ್‌ಮನೆ ಶಾಖೆ
8. ಶ್ರೀಮತಿ ಹರಿಣಾಕ್ಷಿ : ಕಿರಿಯ ಇಂಜಿನಿಯರ್(ವಿ). ಭಾಗಮಂಡಲ ಶಾಖೆ
9. ಶ್ರೀ ಅನಿಲ್ ಕುಮಾರ್ : ಕಿರಿಯ ಇಂಜಿನಿಯರ್(ವಿ). ಸಂಪಾಜೆ ಶಾಖೆ
10. ಶ್ರೀ ಕೆ.ವಿ.ನಾಗೇಂದ್ರ : ಪ್ರಭಾರ ಕಿರಿಯ ಇಂಜಿನಿಯರ್(ವಿ). ಮೂರ್ನಾಡು ಶಾಖೆ,
11. ಶ್ರೀ ಮಹಮ್ಮದ್ ಫಾರುಕ್ : ಪ್ರಭಾರ ಕಿರಿಯ ಇಂಜಿನಿಯರ್(ವಿ). ನಾಪೋಕ್ಲು ಶಾಖೆ

ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿದರು.

| | | |
|---|---|---|
| 1 | ಶ್ರೀ ಮುತ್ತಪ್ಪ ರೈಸುದರ್ಶನ ಸರ್ಕಲ್ ಹತ್ತಿರ ಮಡಿಕೇರಿ ರವರು ತಮ್ಮ ಮನೆಯ ಸುತ್ತಮುತ್ತ ಬೀದಿ ದೀಪದ ವ್ಯವಸ್ಥೆ ಸರಿಯಿಲ್ಲದಿರುವ ಬಗ್ಗೆ ತಿಳಿಸಿರುತ್ತಾರೆ. | ನೀರು ಸರಬರಾಜು ಹಾಗೂ ಬೀದಿ ದೀಪಗಳಿಗೆ ವಿದ್ಯುತ್ ಸಂಪರ್ಕವು ನಮ್ಮ ಇಲಾಖಾ ವ್ಯಾಪ್ತಿಗೆ ಬರುವುದಿಲ್ಲ.ಈ ವಿಷಯವಾಗಿ ನಗರ ಸಭೆಗೆ ಸಂಪರ್ಕಿಸಲು ಗ್ರಾಹಕರಿಗೆ ತಿಳಿಸಲಾಗಿದೆ. |
| 2 | ಶ್ರೀ ಪಿ.ಎಸ್.ಚೀಯಣ್ಣ ಅರಪಟ್ಟು ಗ್ರಾಮ ಮೂರ್ನಾಡು ರವರು ಸೌಭಾಗ್ಯ ಯೋಜನೆಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕೇಳಿಕೊಂಡಿರುತ್ತಾರೆ. | ಮೂರ್ನಾಡು ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಸೌಭಾಗ್ಯ ಯೋಜನೆಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಸೂಚಿಸಲಾಗಿದೆ. |
| 3 | ಶ್ರೀ ಯೂನಸ್ ಮಡಿಕೇರಿ ರವರ ತಮ್ಮ ಮನೆಯ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿರುವ ಬಗ್ಗೆ ದೂರು ನೀಡಿರುತ್ತಾರೆ. | ಈ ಬಗ್ಗೆ ಶಾಖಾಧಿಕಾರಿಯವರಲ್ಲಿ ವಿಚಾರಿಸಲಾಗಿ ಇವರ ಹೆಸರಿನ ಇತರೇ ಸ್ಥಾವರಗಳಲ್ಲಿನ ವಿದ್ಯುತ್ ಬಿಲ್ಲು ಬಾಕಿ ಉಳಿಸಿಕೊಂಡಿರುವ ಕಾರಣ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿದೆ ಎಂದು ಹೇಳಿರುತ್ತಾರೆ. ವಿದ್ಯುತ್ ಬಾಕಿಯನ್ನು ಪಾವತಿಸಿ ಮರು ಸಂಪರ್ಕ ತೆಗೆದುಕೊಳ್ಳಲು ತಿಳಿಸಲಾಗಿದೆ. |
| 4 | ಶ್ರೀ ಮಂದಣ್ಣ ಪಾಣತ್ತಲೆ ಕಟ್ಟೆಮಾಡು ಹಾಗೂ ದೇವಯ್ಯ ಇವರು 11 ಕೆ.ವಿ.ಸ್ಥಳಾಂತರ ಕೆಲಸ ಮಾಡದಿರುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ. | ಈ ಬಗ್ಗೆ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಲಾಗಿದೆ. |
| 5 | ಗಂಗಾಧರ್ ಮಡಿಕೇರಿ ರವರ ಮನೆಯ ಮೇಲೆ ವಿದ್ಯುತ್ ಮಾರ್ಗ ಹಾದು ಹೋಗಿರುವ ಬಗ್ಗೆ ತಿಳಿಸಿರುತ್ತಾರೆ. | ಮಡಿಕೇರಿ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ವರದಿ ನೀಡುವಂತೆ ತಿಳಿಸಿರುತ್ತಾರೆ. |

ಕಾರ್ಯನಿರ್ವಾಹಕ ಇಂಜಿನಿಯರ್(ವಿ)

ಕಾರ್ಯ ಮತ್ತು ಪಾಲನೆ ವಿಭಾಗ ಮಡಿಕೇರಿ.

ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗ

ಪ್ರತಿಯನ್ನು:-

1. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಸೆಸ್ಕ್ ಮಡಿಕೇರಿ ಉಪ ವಿಭಾಗ ರವರ ಮಾಹಿತಿಗಾಗಿ.
2. ಶಾಖಾಧಿಕಾರಿಗಳು, ಮಡಿಕೇರಿ ...